<u>ದಿನಾಂಕಃ 21.01.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು</u>

<u>ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರವಾಗಿ Sri. VRP, ವಕೀಲರಿಂದ</u>

6. ಸರ್ವೇ ನಂ.8/1 2-3 ಸಲ ಅಳತೆ ಆಗಿದ್ದು ದಿನಾಂಕ ನನಗೆ ನೆನಪಿರುವುದಿಲ್ಲ. ಸರ್ವೇ ನಂ.8/1 2014 ರಲ್ಲಿ ಒಮ್ಮೆ ಅಳತೆಯಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2021 ರ ಪೂರ್ವದಲ್ಲಿ ಸರ್ವೇ ನಂ.8/1 ಅಳತೆ ಆಗಿರುವ ದಾಖಲೆಗಳು ನನ್ನ ಬಳಿ ಇರುವುದಿಲ್ಲ. 2021 ರ ಪೂರ್ವದಲ್ಲಿ ಸರ್ವೇ ನಂ.8/1 ಅಳತೆ ಆಗಿರುವ ದಾಖಲೆಗಳು ಸರಿಯಾಗಿದ್ದು ಕಾರಣ ಅವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

7. 2021 ರಲ್ಲಿ ಸರ್ವೇ ಇಲಾಖೆಯವರು ಸರ್ವೇ ನಂ.8/1 ರ ಆಸ್ತಿಗೆ ಭೇಟಿ ನೀಡಿಲ್ಲ ಮತ್ತು ಯಾವುದೇ ಅಳತೆ ಕಾರ್ಯ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಆಸ್ತಿಯಲ್ಲಿ ಸರ್ವೇ ಕಾರ್ಯ ಮಾಡಿದಾಗ ಸ್ಥಳದಲ್ಲಿ ಪಂಚನಾಮೆ ತಯಾರಿಸುತ್ತಾರೆ ಎಂದರೆ ಸರಿ. 2021 ರ ಅಳತೆ ಮಾಡುವ ಕಾಲಕ್ಕೆ ನಾನು ಹಾಜರು ಇದ್ದೆ. 2021 ರಲ್ಲಿ ಮಾಡಿದ ಸರ್ವೇ ದಿನಾಂಕ ನನಗೆ ನೆನಪಿರುವುದಿಲ್ಲ. ಸರ್ವೇ ಮಾಡುವ ಕಾಲಕ್ಕೆ ಹಾಗು ನ್ಯಾಯಾಲಯದಲ್ಲಿ ದಾವೆಯ ತಾರೀಖಿನ ದಿನಾಂಕಕ್ಕೆ ನಾನು ಖುದ್ದಾಗಿ ಹಾಜರಾದರೆ ಇಲಾಖೆಯಲ್ಲಿ ರಜೆ ಪಡೆದು ಹಾಜರಾಗುತ್ತೇನೆ.

8. 2021 ರ ಸರ್ವೇ ಕಾಲಕ್ಕೆ ಲೋಹಾರ ಮತ್ತು ಕಾರಡಗಿ ಎಂಬುವವರು ಪಂಚಾಯತಿ ದಸ್ತರಾಗಿ ಹಾಜರಿದ್ದರು. ಸರ್ವೇ ಮಾಡುವ ಕಾಲಕ್ಕೆ ಪಂಚಾಯತಿ ದಸ್ತರಾಗಿ 5 ಜನ ಸಾಕ್ಷಿದಾರರ ಸಹಿ ಪಡೆಯುತ್ತಾರೆ ಎಂದರೆ ಸರಿ. ನಾನು 2021

ರ ಕಾಲಕ್ಕೆ ಆಗಿರುವ ಸರ್ವೇ ಕಾಲಕ್ಕೆ ಹಾಜರಿದ್ದ ಪಂಚನಾಮೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

9. ನಿಪಿ.4 ಅಕ್ಕ ಪಕ್ಕದ ಜಮೀನಿನ ಒಪ್ಪಿ ಗೆ ಪತ್ರವಾಗಿದ್ದು, ಪಂಚನಾಮೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.4 ನ್ನು ಹೊರತುಪಡಿಸಿ ಪಂಚನಾಮೆ ಆಗಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸರ್ವೇ ಇಲಾಖೆಯವರು ನೀಡಿದ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.4 ರಲ್ಲಿರುವ ಲಾಗುದಾರರ ಸಹಿಗಳು ಖೊಟ್ಟಿಯಾಗಿದ್ದು, ಸರ್ವೇ ಇಲಾಖೆಯವರೊಂದಿಗೆ ಮಿಲಾಪಿಯಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಗ್ರಾಮ ಪಂಚಾಯತಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದು, ಸರ್ವೇ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ನಿಪಿ.7 ನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

10. ವಾದಿಯು ಅನಾರೋಗ್ಯದಿಂದ ಬಳಲುತ್ತಿರುವ ವಿಚಾರವಾಗಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ವಾದಿಯು ಸಾಕ್ಷಿ ನುಡಿದರೆ ನಿಜಾಂಶ ಹೊರ ಬರುತ್ತದೆ ಎಂಬ ಕಾರಣಕ್ಕೆ ಅವರ ಪರವಾಗಿ ಅಧಿಕಾರ ಪತ್ರ ಪಡೆದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ಪ್ರತಿವಾದಿಯು ವಾದಿಯ ಆಸ್ತಿಯನ್ನು ಯಾವುದೇ ಅತಿಕ್ರಮಣ ಮಾಡದೆ ಇದ್ದರು ಮತ್ತು ಅತಿಕ್ರಮ ಮಾಡಿರುವ ಆಸ್ತಿಯು ಪ್ರತಿವಾದಿಯ ಆಸ್ತಿಯಲ್ಲಿಯೇ ಬರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.7/3 ರ ಆಸ್ತಿಯನ್ನು 3 ಜನ ಖರೀದಿದಾರರು ಲೋಹಾರ ಎಂಬುವವರ ಕಡೆಯಿಂದ ಒಂದೇ ದಿನ

ಪ್ರತ್ಯೇಕ ವಿಸ್ತೀರ್ಣಗಳನ್ನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು 8/1 ರ ವಿಸ್ತೀರ್ಣವನ್ನು ನಾವು ಖರೀದಿಸಿದ್ದೇವೆ ಎಂದು ನುಡಿಯುತ್ತಾರೆ.

12. 2003 ರ ಖರೀದಿದಾರರು ಅವರ ಖರೀದಿ ಪತ್ರದ ವಿಸ್ತೀರ್ಣದಂತೆ ವಹಿವಾಟು ಮಾಡುತ್ತಿದ್ದಾರೆ ಎಂದರೆ ನನಗೆ ಗೋತ್ತಿಲ್ಲ, ಸಾಕ್ಷಿಯು ಮುಂದುವರೆದು ವಾದಿಯು 2006 ರಲ್ಲಿ ಖರೀದಿಸಿದ್ದು ಅದರಂತೆ ಸ್ವಾ ಧೀನ ಹೊಂದಿದ್ದಾರೆ ಎಂದು ನುಡಿಯುತ್ತಾರೆ. 2021 ರ ಸರ್ವೇ ಕಾರ್ಯದಂತೆ ವಾದಿಯ ಮಾಲೀಕರನ್ನು ವಿಚಾರಿಸಿದ್ದಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ವಾದಿಯ ಮಾಲೀಕ ಮರಣ ಹೊಂದಿದ್ದು ಅವರ ವಾರಸುದಾರರ ಬಳಿ ವಿಚಾರಿಸಿರುತ್ತೇವೆ ಎಂದು ನುಡಿಯುತ್ತಾರೆ. ವಾದಿಯ ಮಾರಾಟಗಾರರಿಗೆ ಅತಿಕ್ರಮಣದ ವಿಚಾರವನ್ನು ತಿಳಿಸಿದ್ದು, ಅದಕ್ಕೆ ಪ್ರತಿವಾದಿಯು ಒಪ್ಪುತ್ತಿಲ್ಲ ಎಂದು ತಿಳಿಸಿರುತ್ತೇವೆ. ಸದರಿಯವರು ಸರ್ವೇ ಮಾಡಿಸುವಂತೆ ತಿಳಿಸಿರುತ್ತಾರೆ. ನನ್ನ ವಾದಪತ್ರ, ಮುಖ್ಯ ವಿಚಾರಣೆ ಮತ್ತು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲಃ</u>

<u>(ನನ್ನ ಉಖ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)</u>

ಓ.ಹೇಳಿ.ಕೇ.ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಲಕ್ಷ್ಮೇಶ್ವರ